# ವಾರ್ಡ್ ಮಟ್ಟದ ಸಮಿತಿ ಸಭೆಯಲ್ಲಿ ಹಾಜರಿದ್ದ ವಿವಿಧ ಇಲಾಖೆಯ ನೌಕರರ ಮತ್ತು ಸಿಬ್ಬಂದಿಗಳ ವಿವರಗಳು

## ವಾರ್ಡ್ ಸಂಖ್ಯೆ:133, ಹಂಪಿನಗರ ವಾರ್ಡ್ ಮಟ್ಟದ ಸಮಿತಿ

ದಿನಾಂಕ:18-12-2021 ರಂದು ವಾರ್ಡ್ ಸಂಖ್ಯೆ:133, ಹಂಪಿನಗರ, ಮಹಾನಗರ ಪಾಲಿಕೆ ವಾರ್ಡ್ ಕಛೇರಿಯಲ್ಲಿ ಕರೆಯಲಾಗಿದ್ದ ವಾರ್ಡ್ ಮಟ್ಟದ ಸಮಿತಿಯ ಸಭೆಯಲ್ಲಿ ಪೂರ್ವಾಹ್ನ 11.00 ಗಂಟೆಗೆ ಸಮಿತಿಯ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸಿದ್ದ ವಿವಿಧ ಇಲಾಖೆಯ ನೌಕರರು ಮತ್ತು ಸಿಬ್ಬಂದಿಗಳ ವಿವರಗಳು

## ಸಭೆಯಲ್ಲಿ ಹಾಜರಿದ್ದ ವಿವಿಧ ಇಲಾಖೆಯ ನೌಕರರು & ಸಿಬ್ಬಂದಿಗಳ ವಿವರ

| ಕ್ರ ಸಂ | ಹೆಸರು | ಪದನಾಮ | ಇಲಾಖೆ | ದೂರವಾಣಿ ಸಂಖ್ಯೆಗಳು |
|---|---|---|---|---|
| 1 | ಶ್ರೀ ಸ್ವಾಮಿ.ಕೆ.ಎಸ್ | ಕಾರ್ಯದರ್ಶಿ & ಸಹಾಯಕ ಅಭಿಯಂತರರು | ಬೃ.ಬೆಂ.ಮ.ಪಾ | 94495 29504 |
| 2 | ಶ್ರೀ ವೆಂಟೇಶ್.ಸಿ | ಕಂದಾಯ ಪರಿವೀಕ್ಷಕರು | ಬೃ.ಬೆಂ.ಮ.ಪಾ | |
| 3 | ಶ್ರೀ ನಿಂಗರಾಜು.ಹೆಚ್ | ಆರಕ್ಷಕ ನಿರೀಕ್ಷಕರು, ಸಂಚಾರಿ ವಿಭಾಗ | ಆರಕ್ಷಕ | 96111 02429 |
| 4 | ಶ್ರೀ ಬಸವರಾಜು.ಎನ್ | ಆರಕ್ಷಕ ನಿರೀಕ್ಷಕರು, ಕಾನೂನು ಮತ್ತು ಸುವ್ಯವಸೆ | ಆರಕ್ಷಕ | 94801 17580 |
| 5 | ಶ್ರೀ ಲಕ್ಷ್ಮಣ.ಸಿ.ಎನ್ | ಸಹಾಯಕ ಕಂದಾಯ ಪರಿವೀಕ್ಷಕರು, | ಬೃ.ಬೆಂ.ಮ.ಪಾ | 99458 01154 |
| 6 | ಶ್ರೀ ಕಿರಣ್.ಬಿ | ಸಹಾಯಕ ಕಂದಾಯ ಪರಿವೀಕ್ಷಕರು, | ಬೃ.ಬೆಂ.ಮ.ಪಾ | |
| 7 | ಶ್ರೀ ಮಾರುತಿ ಶೇಟ್ , | ಹಿರಿಯ ಆರೋಗ್ಯಾಧಿಕಾರಿಗಳು | ಬೃ.ಬೆಂ.ಮ.ಪಾ | |
| 8 | ಶ್ರೀಮತಿ ದೀಪಾ.ಡಿ | ಶುಶ್ರೂಷಕಿ, | ಬೃ.ಬೆಂ.ಮ.ಪಾ | 99001 36214 |
| 9 | ಡಾ. ಭಾವನಾ | ವೈದ್ಯರು, | ಬೃ.ಬೆಂ.ಮ.ಪಾ | |
| 10 | ಶ್ರೀ ಲಕ್ಷ್ಮಿನರಸಿಂಹಯ್ಯ | ತೋಟಗಾರಿಕೆ ಇಲಾಖೆ | ಬೃ.ಬೆಂ.ಮ.ಪಾ | |
| 11 | ಶ್ರೀಮತಿ ಕವಿತಾ.ಕೆ | ಕಿರಿಯ ಆರೋಗ್ಯಾಧಿಕಾರಿಗಳು | ಬೃ.ಬೆಂ.ಮ.ಪಾ | 99166 82657 |
| 12 | ಶ್ರೀ ಕೆಂಪಣ್ಣ | ಕಾಮಗಾರಿ ಮೇಸ್ತ್ರಿ | ಬೃ.ಬೆಂ.ಮ.ಪಾ | 98445 25426 |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ:133, ಹಂಪಿನಗರ ವಾರ್ಡ್ ಮಟ್ಟದ ಸಮಿತಿ

ದಿನಾಂಕ:18-12-2021 ರಂದು ವಾರ್ಡ್ ಸಂಖ್ಯೆ:133, ಹಂಪಿನಗರ ಮಹಾನಗರ ಪಾಲಿಕೆ ವಾರ್ಡ್ ಕಛೇರಿಯಲ್ಲಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ಪೂರ್ವಾಹ್ನ 11.00 ಗಂಟೆಗೆ ಸಮಿತಿಯ ಕಾರ್ಯದರ್ಶಿ ರವರ ನೇತೃತ್ವದಲ್ಲಿ ವಾರ್ಡ್ ಮಟ್ಟದ ಸಮಿತಿಯ ಸರ್ವ ಸದಸ್ಯರ ಸಭೆಯನ್ನು ಕರೆಯಲಾಯಿತು.

## ಸಭೆಯಲ್ಲಿ ಹಾಜರಿದ್ದ ಸಮಿತಿ ಸದಸ್ಯರುಗಳು & ಸಾರ್ವಜನಿಕರ ವಿವರ

| ಕ್ರ.ಸಂ | ಹೆಸರು | ಸಾರ್ವಜನಿಕ ಸಂಸ್ಥೆ/ ಸಾರ್ವಜನಿಕರು & ವಿಳಾಸ | ದೂರವಾಣಿ ಸಂಖ್ಯೆಗಳು |
|---|---|---|---|
| 1 | ಶ್ರೀ ರಮೇಶ್.ಬಿ.ಆರ್. | ಸಾರ್ವಜನಿಕರು, ಹಂಪಿನಗರ | 99019 77338 |
| 2 | ಶ್ರೀ ವೆಂಕಟೇಶ್ | ಸಾರ್ವಜನಿಕರು, ಮಾರುತಿನಗರ | 99010 57285 |

# ದಿನಾಂಕ:18-12-2021 ರಂದು ನಡೆದ ವಾರ್ಡ್ ಸಂಖ್ಯೆ:133, ಹಂಪಿನಗರ, ವಾರ್ಡ್ ಮಟ್ಟದ ಸಮಿತಿಯ ನಡಾವಳಿಗಳು

1 ಕಾರ್ಯದರ್ಶಿಗಳಾದ ಶ್ರೀ ಸ್ವಾಮಿ.ಕೆ.ಸ್.ರವರು ಹಾಜರಿದ್ದ ಎಲ್ಲರಿಗೂ ಸ್ವಾಗತ ಕೋರುವ ಮೂಲಕ ಸಭೆಯನ್ನು ಆರಂಭಿಸಲಾಯಿತು.

2 ಸಭೆಯಲ್ಲಿ ಹಾಜರಿದ್ದ ಶ್ರೀ ರಮೇಶ್, ಸಾರ್ವಜನಿಕರು ಮಾತನಾಡುತ್ತಾ ಹಂಪಿನಗರ 8ನೇ ಮುಖ್ಯ ರಸ್ತೆ, 4ನೇ ಅ... ಅಡ್ಡ ರಸ್ತೆಯಲ್ಲಿ ಹದಿ ಹರೆಯದ ಹುಡುಗರು ಮನಸೋ ಇಚ್ಛೆ ಬೈಕ್‌ಗಳಲ್ಲಿ ವೀಲಿಂಗ್ ಮಾಡುವುದು ಮತ್ತು ಅತಿ ವೇಗವಾಗಿ ವಾಹನ ಚಾಲನೆ ಮಾಡುವುದು ಸರ್ವೆ ಸಾಮಾನ್ಯವಾಗಿರುವ ಬಗ್ಗೆ ಸಭೆಯ ಗಮನ ಸೆಳೆದು ಸದರಿ ರಸ್ತೆಯಲ್ಲಿರುವ ಮನೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚಿಕ್ಕ-ಪುಟ್ಟ ಮಕ್ಕಳು ಇದ್ದು ಆ ಮಕ್ಕಳುಗಳು ರಸ್ತೆಯಲ್ಲಿ ಹೆಚ್ಚಿನ ಸಮಯವನ್ನು ಆಟೋಟಗಳಲ್ಲಿ ಕಾಲ ಕಳೆಯುತ್ತಿರುವುದರಿಂದ ಯಾವುದೇ ರೀತಿಯ ಅವಘಡಗಳು ಸಂಭವಿಸುವ ಸಂದರ್ಭಗಳನ್ನು ಎದುರಿಸಬೇಕಾಗಬಹುದು ಎಂದು ತಿಳಿಸುತ್ತಾ ಅವುಗಳನ್ನು ತಡೆಗಟ್ಟಲು ಸಭೆಯಲ್ಲಿ ಕೋರಿರುತ್ತಾರೆ.

2ಎ **ಕ್ರಮ: ಈ ವಿಚಾರವಾಗಿ ಸಭೆಯಲಿ ಮಾತನಾಡಿದ ಶ್ರೀಯುತ ನಿಂಗರಾಜು ಹೆಚ್.ರವರು ವೀಲಿಂಗ್ ಮಾಡುವಂತಹ ಸಮಯದಲ್ಲಿ ವಿಡಿಯೋ ಮಾಡಿಕೊಳ್ಳುವುದು ಹಾಗೂ ಹೊಸದಾಗಿ ಪಬ್ಲಿಕ್ ಐ ಎಂಬ ಆಪ್ ಬಂದಿರುವುದರಿಂದ ಅಂತಹ ಸಮಯದಲ್ಲಿ ಆಪ್ ಬಳಸಿ ವೀಲಿಂಗ್ ಮಾಡುತ್ತಿರುವವರ ಪೋಟೋ ತೆಗೆದು ಆರಕ್ಷಕ ಠಾಣೆಗೆ ನೀಡಿದ ಪಕ್ಷದಲ್ಲಿ ಅವರುಗಳ ಮೇಲೆ ಶಿಸ್ತು ಕ್ರಮ ಜರುಗಿಸಲು ಅನುಕೂಲವಾಗುವುದು ಹಾಗು ಸದರಿ ರಸ್ತೆಯಲ್ಲಿ ಹೊಯ್ಸಳ ವಾಹನದ ಗಸ್ತು ವ್ಯವಸ್ಥೆಯನ್ನು ಹೆಚ್ಚಿಸಲು ಕ್ರಮ ವಹಿಸುವುದಾಗಿ ಸಭೆಗೆ ತಿಳಿಸಿದರು.**

3 ಆರಕ್ಷಕ ಇಲಾಖೆಯ ಸಹಾಯಕ ನಿರೀಕ್ಷಕರಾದ ಶ್ರೀ ಬಸವರಾಜು.ಎನ್ ರವರು ಮಾತನಾಡುತ್ತಾ ರೈ... ಸಮಾನಾಂತರ ರಸ್ತೆಯಲ್ಲಿ ಬೀದಿ ದೀಪದ ವ್ಯವಸ್ಥೆ ಇಲ್ಲದಿರುವುದರಿಂದಾಗಿ ರಸ್ತೆ ಪಕ್ಕದಲ್ಲಿ ನಿಲುಗಡೆ ಮಾಡಿರು... ವಾಹನಗಳ ಮಧ್ಯ ಭಾಗಗಳು ಸಮಾಜ ಘಾತುಕ ವ್ಯಕ್ತಿಗಳಿಗೆ ಅನುಕೂಲಕರವಾಗಿರುವ ಬಗ್ಗೆ ಪ್ರಸ್ತಾಪಿಸಿ ತುರ್ತಾ... ಸದರಿ ರಸ್ತೆಯಲ್ಲಿ ಬೀದಿ ದೀಪಗಳ ವ್ಯವಸ್ಥೆ ಒದಗಿಸುವ ಬಗ್ಗೆ ಮಹಾನಗರ ಪಾಲಿಕೆ ವತಿಯಿಂದ ತುರ್ತು ಕ್ರ... ಕೈಗೊಳ್ಳಲು ಕೋರಿದರು.

3ಎ **ಕ್ರಮ: ಈ ವಿಚಾರವಾಗಿ ಮಾತನಾಡಿದ ವಾರ್ಡ್‌ನ ಅಭಿಯಂತರರವರು ತುರ್ತಾಗಿ ಈ ಬಗ್ಗೆ ಅಗತ್ಯ ಕ್ರ... ವಹಿಸಿ ಬೀದಿ ದೀಪಗಳನ್ನು ಅಳವಡಿಸುವ ಬಗ್ಗೆ ಸಂಬಂಧಿಸಿದವರೊಂದಿಗೆ ಮಾತನಾಡಿ ವ್ಯ... ಮಾಡಿಕೊಡುವುದಾಗಿ ಸಭೆಗೆ ತಿಳಿಸಿದರು.**

4 ಶ್ರೀ ವೆಂಕಟೇಶ್ ಮತ್ತು ರಮೇಶ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಇತ್ತೀಚೆಗೆ ಪಾದಚಾರಿ ಮಾರ್ಗ... ವ್ಯಾಪಾರಸ್ಥರು, ತಿಂಡಿ ತಿನಿಸು ಮಾಡುವವರು ಹೆಚಾಗಿದ್ದು ಪಾದಚಾರಿಗಳು ಅನಿವಾರ್ಯವಾಗಿ ರಸ್ತೆ... ಸಂಚರಿಸಬೇಕಾಗಿದ್ದು ಈ ಬಗ್ಗೆ ಅಗತ್ಯ ಕ್ರಮ ವಹಿಸುವಂತೆ ಕೋರಿದರು.

4ಎ ಕ್ರಮ: ಈ ವಿಚಾರವಾಗಿ ಮಾತನಾಡಿದ ಆರಕ್ಷಕ ಇಲಾಖೆಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದವರು ಮಹಾನಗರ ಪಾಲಿಕೆಯವರು ದಿನಾಂಕವನ್ನು ನಿಗಧಿಪಡಿಸಿಕೊಂಡಲ್ಲಿ ಜಂಟಿಯಾಗಿ ಪಾದಚಾರಿ ತೆರವು ಕಾರ್ಯಕ್ರಮವನ್ನು ಕೈಗೊಳ್ಳಲು ಸೂಕ್ತ ಬಂದೋ ಬಸ್ತ್ ನೀಡಲು ಅನುಕೂಲವಾಗುತ್ತದೆ ಎಂದು ದಿನಾಂಕ ನಿಗಧಿಗೊಳಿಸಿ ಮಾಹಿತಿ ನೀಡಲು ಸಭೆಗೆ ತಿಳಿಸಿದರು.

5 2021-22ನೇ ಸಾಲಿನ ಆರ್ಥಿಕ ವರ್ಷದಲ್ಲಿ ವಾರ್ಡ್ ವ್ಯಾಪ್ತಿಯಲ್ಲಿ ನಿರ್ವಹಣೆ ಕಾಮಗಾರಿ ಕುರಿತು

5ಎ ಕ್ರಮ: ಈ ವಿಚಾರವಾಗಿ ಮಾತನಾಡಿದ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಯವರು ವಾರ್ಡ್ **133** ರಲ್ಲಿ ಈ ಕೆಳಕಂಡ ನಿರ್ವಹಣೆ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಸದರಿ ಕಾಮಗಾರಿಗಳ ಪ್ರಸ್ತಾವನೆಯನ್ನು ಸಭೆಯಲ್ಲಿ ಮಂಡಿಸಿದರು. ಸದರಿ ಕಾಮಗಾರಿಗಳ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಸಲ್ಲಿಸಲು ನಿರ್ಣಯ ಕೈಗೊಂಡು **2021-22**ನೇ ಸಾಲಿನಲ್ಲಿ ನಿರ್ವಹಣೆಗಾಗಿ ನೀಡಿರುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ನಿರ್ಣಯ ಕೈಗೊಂಡು ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು ಅನುಮೋದನೆಗಾಗಿ ಸಲ್ಲಿಸಲು ನಿರ್ಧರಿಸಲಾಯಿತು.

ಕಾಮಗಾರಿಗಳ ವಿವರಗಳು:-

| Sl. No | Name of works | Est Cost (Rs in lakhs) |
|---|---|---|
| 1 | Annual Maintenance of Borewells and Water supply lines in Ward Jurisidiction in Ward No.133 | 20.00 |
| 2 | Maintenance of Footpaths, Drains & Re-Asphalting of damaged roads in Ward Jurisidiction in Ward No.133 | 20.00 |
| 3 | Filling of Pot holes in Ward Jurisidiction in Ward No.133 | 20.00 |

5 ಸಭೆಯನ್ನು ಶ್ರೀ ಲಕ್ಷ್ಮಣ್ ರವರ ವಂದನಾರ್ಪಣೆಯೊಂದಿಗೆ ಮುಕ್ತಾಯ ಮಾಡಲಾಯಿತು.

ಸಹಾಯಕ ಅಭಿಯಂತರರು &
ಕಾರ್ಯದರ್ಶಿಗಳು, ವಾರ್ಡ್-133

ಅಧ್ಯಕ್ಷರು &
ನೋಡಲ್
ಅದಿಕಾರಿಗಳು.